ಹಾಸ್ಟೆಲ್ ಪ್ರಾರಂಭಿಸುವುದು.

1286(1231) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :— ಮಾನ್ಯ ಸಮಾಜ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಾತ್ರಿಕೆಹಾಳ್ ಗ್ರಾಮದಲ್ಲಿ ಪರಿಶಿಷ್ಟ ಪಂಗಡದ ಹಾಸ್ಟೆಲ್ ಪ್ರಾರಂಭಿಸಲು ಕ್ಷೇತ್ರದ ಜನಪ್ರತಿನಿಧಿಗಳಿಂದ ಮತ್ತು ಸಾರ್ವಜನಿಕರಿಂದ ಮನವಿಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದಲ್ಲಿ ಈ ಸಾಲಿನಲ್ಲಿಯೇ ಹಾಸ್ಟೆಲ್‌ನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಹೌದು.

ಆ) ಸಧ್ಯಕ್ಕೆ ಇಲ್ಲ.

ಮತ್ಸ್ಯ ಆಶ್ರಯ ಯೋಜನೆಯಡಿ ಮಸತಿ ಸೌಲಭ್ಯ.

1287(1232) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :— ಮಾನ್ಯ ಮೀನುಗಾರಿಕೆ, ಬಂದರು ಹಾಗೂ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಗುರುತಿಸಲಾಗಿರುವ ಮೀನುಗಾರರ ಸಂಖ್ಯೆ ಎಷ್ಟು; (ವಿವರ ನೀಡುವುದು)

ಆ) ಮೀನುಗಾರರಿಗೆ 'ಮತ್ಸ್ಯ ಆಶ್ರಯ' ಯೋಜನೆಯಡಿ ಎಷ್ಟು ಜನರಿಗೆ ಇಲ್ಲಿವರೆವಿಗೆ ಮಸತಿ ಸೌಲಭ್ಯ ಒದಗಿಸಲಾಗಿದೆ?

ಇ) ಈ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಕಾಯ್ದಿರಿಸಿರುವ ಫಲಾನುಭವಿಗಳೆಷ್ಟು?

ಈ) ಇನ್ನೆಷ್ಟು ದಿನಗಳಲ್ಲಿ ಈ ಫಲಾನುಭವಿಗಳಿಗೆ ಮಸತಿ ಸೌಲಭ್ಯ ಒದಗಿಸಲಾಗುವುದು?

ಶ್ರೀ ಬಿ. ರಮಾನಾಥ್ ರೈ. (ಮೀನುಗಾರಿಕೆ, ಬಂದರು ಹಾಗೂ ಪ್ರವಾಸೋದ್ಯಮ ಸಚಿವರು) :—

ಅ) 76. ವಿವರ ಕೆಳಗಿನಂತಿದೆ.

	ಗ್ರಾಮದ ಹೆಸರು	ಮೀನುಗಾರರ ಸಂಖ್ಯೆ
1)	ಮಾಕುನಹಳ್ಳಿ ಬೆಸ್ತರ ಪಾಳ್ಯ	17
2)	ಮಾಕುನಳ್ಳಿ	3
3)	ಮಾಸ್ತಿಕೆರೆ	16
4)	ಕಟ್ಟಿಕೆರೆ ಹೆ.ಎಸಪಾಳ್ಯ	25
5)	ಕಟ್ಟಿಕೆರೆ	15
	ಒಟ್ಟು	76

ಆ) ಯಾವುದೂ ಇಲ್ಲ.

ಇ) ಇಲ್ಲ.

ಈ) 2002-03ನೇ ಸಾಲಿಗೆ ಚಿಕ್ಕಾಯಕನಹಳ್ಳಿ ತಾಲ್ಲೂಕಿಗೆ 10 ಮನೆಗಳನ್ನು ಮಂಜೂರುಮಾಡಲಾಗಿದೆ. ಹಾಗೂ ಮುಂಬರುವ ಸಾಲುಗಳಲ್ಲಿ, ಅನುದಾನ ಲಭ್ಯತೆಗನುಸಾರವಾಗಿ ವಸತಿ ಸೌಲಭ್ಯ ಒದಗಿಸಲಾಗುವುದು.

ಚಿಕ್ಕೋಡಿ ತಾಲ್ಲೂಕು ಕಬ್ಬೂರ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಕಟ್ಟಡ.

1283(1227) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕೋಡಿ ತಾಲ್ಲೂಕು ಕಬ್ಬೂರ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಕೇಂದ್ರ ಕಟ್ಟಡವನ್ನು ಉದ್ಘಾಟನೆ ಮಾಡಿದ್ದು, ಕಟ್ಟಡವನ್ನು ಸಹಾತಂರ ಮಾಡದೆ ಇರುವ ವಿಷಯವು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಾರ್ಯವನ್ನು ಸಂಬಂಧಪಟ್ಟ ಇಲಾಖೆ ಹಸ್ತಾಂತರ ಮಾಡಿ ಕೂಡಲೆ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಪಶುಸಂಗೋಪನಾ ಇಲಾಖೆಗೆ ದಿನಾಂಕ 29ನೇ ನವೆಂಬರ್ 2001ರಂದು ಹಸ್ತಾಂತರವಾಗಿದೆ.

ಆ) ಸದ್ಯದಲ್ಲಿಯೇ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.